# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :719 |
| ಮಾನ್ಯ ಸದಸ್ಯರ ಹೆಸರು | :ಶ್ರೀ ಶಶೀಲ್ ಜಿ ನಮೋಶಿ |
| ಉತ್ತರಿಸುವ ದಿನಾಂಕ | :22.07.2024 |
| ಉತ್ತರಿಸುವ ಸಚಿವರು | :ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ವೃತ್ತಿಪರ ಕೋರ್ಸುಗಳಾದ ಇಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವಿವಿಧ ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪ್ರಸಕ್ತ ಸಾಲಿನಲ್ಲಿ ನಡೆಸಿದ ಕೆ-ಸಿಇಟಿ ಪ್ರವೇಶ ಪರೀಕ್ಷೆಯ ಪಠ್ಯಕ್ರಮವನ್ನು ಹೊರತುಪಡಿಸಿ ಸುಮಾರು 45ಕ್ಕೂ ಹೆಚ್ಚು ಪ್ರಶ್ನೆಗಳನ್ನು ಕೇಳಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಆತಂಕವುಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು ಬಂದಿದೆ.<br><br>ಸರ್ಕಾರದ ಆದೇಶ ಸಂ:ಇಡಿ 173 ಟಿಇಸಿ 2024, ದಿನಾಂಕ:22.04.2024ರಲ್ಲಿ ವಿಷಯ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ದಿನಾಂಕ:23.04.2024ರಂದು ನೀಡಿದ ವರದಿಯ ಪ್ರಕಾರ 2024ನೇ ಸಾಲಿನ ಸಿಇಟಿ ಪರೀಕ್ಷೆಯಲ್ಲಿ ನಾಲ್ಕು ವಿಷಯಗಳ ಒಟ್ಟು 50 ಪ್ರಶ್ನೆಗಳು (ಭೌತಶಾಸ್ತ್ರ-09, ರಸಾಯನ ಶಾಸ್ತ್ರ-15, ಗಣಿತ-15 ಮತ್ತು ಜೀವಶಾಸ್ತ್ರ-09) ಪಠ್ಯಕ್ರಮದಿಂದ ಹೊರತಾದ ಪ್ರಶ್ನೆಗಳನ್ನು ಕೇಳಲಾಗಿರುತ್ತದೆ. |
| ಆ | ಕೆ-ಸಿಇಟಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವಾಗ ಅನುಸರಿಸಿದ್ದ ನಿಯಮ ಹಾಗೂ ಮಾನದಂಡಳೇನು? | ನುರಿತ ವಿಷಯ ತಜ್ಞರಿಂದಲೇ ನಿಯಮಾನುಸಾರ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲಾಗಿರುತ್ತದೆ. |
| ಇ | ಈ ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲು ರಾಜ್ಯದಲ್ಲಿ ನುರಿತ ವಿಷಯ ತಜ್ಞರಿಲ್ಲವೇ (ಸ್ಪಷ್ಟನೆಯನ್ನು ನೀಡುವುದು) | |
| ಈ | ಪ್ರಸಕ್ತ ವರ್ಷದ ಕೆ-ಸಿಇಟಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿ ರಾಜ್ಯ ಸರ್ಕಾರಕ್ಕೆ ಮುಜುಗರವನ್ನುಂಟು ಮಾಡಿದ್ದ ತಜ್ಞರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ: (ವಿವರ ನೀಡುವುದು) | ದಿನಾಂಕ 09-05-2024ರ ಸರ್ಕಾರದ ಆದೇಶ ಪ್ರಕಾರ ಶ್ರೀ ಡಿ.ಎನ್. ನರಸಿಂಹರಾಜು, ಅಪರ ಮುಖ್ಯ ಕಾರ್ಯದರ್ಶಿಗಳು (ಭಾ.ಆ.ಸೇ. ನಿವೃತ್ತ) ಇವರ ಏಕ ಸದಸ್ಯ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿ ವಿಚಾರಣೆ ನಡೆಸಿ, ವರದಿ ನೀಡಿದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |
| ಉ | ಇನ್ನೊಮ್ಮೆ ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ | ಪ್ರಾಧಿಕಾರದಿಂದ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಪ್ರವೇಶ ಪರೀಕ್ಷೆಗಳನ್ನು |

| | | |
|---|---|---|
| | ಕೈಗೊಳ್ಳಬಹುದಾದ ಮುಂಜಾಗ್ರತೆ ಕ್ರಮಗಳೇನು: | ಉತ್ತಮ ರೀತಿಯಲ್ಲಿ ನಡೆಸಲಾಗಿದೆ. ಯಾವುದೇ ಪರೀಕ್ಷೆಯಲ್ಲಿ ಗೊಂದಲಗಳು ಇರುವುದಿಲ್ಲ. ಅತ್ಯಂತ ಗೌಪ್ಯತೆಯಿಂದ ಹಾಗೂ ಪಾರದರ್ಶಕತೆಯಿಂದ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿದೆ.<br><br>ಮುಂದುವರೆದು, ಸರ್ಕಾರದಿಂದ ರಚಿವಾಗಿರುವ ಶ್ರೀ ಡಿ.ಎನ್. ನರಸಿಂಹರಾಜು, ಅಪರ ಮುಖ್ಯ ಕಾರ್ಯದರ್ಶಿಗಳು (ಭಾ.ಆ.ಸೇ, ನಿವೃತ್ತ) ಇವರ ಏಕ ಸದಸ್ಯ ಸಮಿತಿಯಿಂದ ನೀಡುವ ಮಾರ್ಗದರ್ಶನಗಳನ್ನು ಮುಂದೆ ಅಳವಡಿಸಲಾಗುವುದು. |

ಸಂ:ಇಡಿ 373 ಟಿಇಸಿ 2024

(ಡಾ. ಎಂ.ಸಿ.ಸುಧಾಕರ್)
**ಉನ್ನತ ಶಿಕ್ಷಣ ಸಚಿವರು**